ಕಿರುತೆರೆಯಲ್ಲಿ ಸಿದ್ದೇಗೌಡರಾಗಿ ಜನರ ಮನಸ್ಸು ಗೆದ್ದಿರುವ ನಟ ಧನಂಜಯ್, ಬೆಳ್ಳಿತೆರೆಯಲ್ಲಿ ನಾಯಕ ನಟನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ರಂಗಭೂಮಿ, ಕಿರುತೆರೆಯ ಹಲವು ವರ್ಷಗಳ ನಂಟನ್ನು, ಸಿನಿಮಾರಂಗದಲ್ಲಿನ ತಮ್ಮ ಕನಸನ್ನು 'ಸುಧಾ'ದೊಂದಿಗೆ ಹಂಚಿಕೊಂಡಿದ್ದಾರೆ.



ಮಾಡಿದ್ದೇನೆ. 30–40 ಸಿನಿಮಾಗಳಲ್ಲಿ ಹೀರೊಗಳಿಗೆ ಡಬ್ ಮಾಡಿದ್ದೇನೆ. ಈಗ ಹೀರೊ ಆಗಿ ಎಂಟ್ರಿ ಕೊಡುತ್ತಿದ್ದೇನೆ. ಚಿಕ್ಕಂದಿನಿಂದಲೂ ಸಿನಿಮಾದಲ್ಲಿ ನಟಿಸುವ ಕನಸು ಕಂಡಿದ್ದ ನಾನು ಸುಮಾರು 12 ವರ್ಷಗಳಿಂದಲೂ ಈ ಕ್ಷೇತ್ರದಲ್ಲಿದ್ದೇನೆ. ಈಗ ನನ್ನ ಕನಸಿನ ದಾರಿಯಲ್ಲಿ ಮೊದಲ ಹೆಜ್ಜೆ ಇಡುತ್ತಿದ್ದೇನೆ.

◆ **ಹೀರೊ ಆಗಿ ಯಾವ ರೀತಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೀರ?**

ಧಾರಾವಾಹಿಯಲ್ಲಿ ಸಿದ್ದೇಗೌಡನಂಥ ಹಳ್ಳಿ ಹುಡುಗನ ಪಾತ್ರದಲ್ಲಿ ನನ್ನನ್ನು ನೋಡಿದ್ದೀರಿ. ಹೊಸ ಸಿನಿಮಾದಲ್ಲಿ ಸಿಟಿಯಲ್ಲಿರುವ ಜಾಲಿ ಜಾಲಿ ಹುಡುಗನ ಪಾತ್ರ. ಈಗಿನ ಪೀಳಿಗೆ ತಮ್ಮನ್ನು ರಿಲೇಟ್ ಮಾಡಿಕೊಳ್ಳುವಂಥ ಸಿನಿಮಾ. ಜೀವನದಲ್ಲಿ ಸೆಟಲ್ ಆಗಬೇಕು ಎಂದು ಎಲ್ಲರೂ ಒದ್ದಾಡುತ್ತಿರುತ್ತೇವೆ. ಏನೇನೋ ಕಸರತ್ತುಗಳನ್ನು ಮಾಡುತ್ತೇವೆ. ಈ ಹಲವು ಒದ್ದಾಟಗಳ ನಡುವೆ ಮಜ ಕೊಡುವಂಥ ಪಾತ್ರ ಎಂದು ಹೇಳಬಹುದು.

◆ **ರಂಗಭೂಮಿ, ಕಿರುತೆರೆ ಕಲಿಸಿಕೊಟ್ಟ ಪಾಠಗಳು?**

ನಮಗೆ ಕೊಟ್ಟ ಕೆಲಸವನ್ನು ಶ್ರದ್ಧೆ, ಪ್ರಾಮಾಣಿಕವಾಗಿ ಮಾಡಬೇಕು, ಕೆಲಸಕ್ಕೆ ಗೌರವ ಕೊಡಬೇಕು ಎಂಬುದನ್ನು ಹೇಳಿಕೊಟ್ಟಿದ್ದು, ಜೀವನದಲ್ಲಿ ಶಿಸ್ತನ್ನು ಕಲಿಸಿಕೊಟ್ಟಿದ್ದು ರಂಗಭೂಮಿ. ಧಾರಾವಾಹಿ ನನ್ನಲ್ಲಿ ಆತ್ಮವಿಶ್ವಾಸ ತುಂಬಿತು. ಇವೆರಡೂ ನನ್ನ ನಟನಾ ಬದುಕಿನ ಗಟ್ಟಿ ಅಡಿಪಾಯಗಳು.

◆ **ಕನ್ನಡ ಸಿನಿಮಾರಂಗದಲ್ಲಿ ಹೊಸಬರು ಎದುರಿಸುವ ಸವಾಲುಗಳು?**

ಮೊದಲನೆಯದ್ದು; ನಕಲಿ ಆಡಿಷನ್‌ಗಳು. ಕೆಲವರು ದುಡ್ಡು ಮಾಡಲು, ಒಂದಷ್ಟು ಕೆಟ್ಟ ವಿಚಾರಗಳಿಗೆ ನಕಲಿ ಆಡಿಷನ್‌ಗಳನ್ನು ಮಾಡುತ್ತಾರೆ. ಒಂದು ಅವಕಾಶಕ್ಕಾಗಿ ಕಾಯುತ್ತಿರುವ ಎಷ್ಟೋ ಕಲಾವಿದರು ಪ್ರಾಮಾಣಿಕವಾಗಿ ಆಡಿಷನ್ ಕೊಡುತ್ತಾರೆ. ಆದರೆ ಈ ರೀತಿಯ ಆಡಿಷನ್‌ಗಳಿಂದಾಗಿ ಸಿನಿಮಾರಂಗದ ಮೇಲೆ ಮೊದಲ ಹೆಜ್ಜೆಯಲ್ಲಿಯೇ ನಂಬಿಕೆ ಕಳೆದುಹೋಗುತ್ತದೆ.

ಎರಡನೆಯದಾಗಿ; ಹೊಸಬರ ಸಿನಿಮಾಗಳನ್ನು ಜನ ನೋಡಲು ಇಷ್ಟಪಡುವುದಿಲ್ಲ. ಒಂದಷ್ಟು ಜನ ಗುಣಮಟ್ಟವಿಲ್ಲದ ಸಿನಿಮಾ ಮಾಡಿ ಒಳ್ಳೆಯ ಸಿನಿಮಾ ಎಂದು ನಂಬಿಸಿ ಜನರನ್ನು ನಿರಾಸೆ ಮಾಡಿದ್ದಾರೆ. ಜನರಲ್ಲಿ ಒಂದು ನೆಗೆಟಿವ್ ಅಭಿಪ್ರಾಯ ಸೃಷ್ಟಿಯಾಗಿದೆ. ಇದು ಒಳ್ಳೆಯ ಸಿನಿಮಾಗಳಿಗೂ ಮುಳ್ಳಾಗಿದೆ. ಕೊನೆಯದಾಗಿ, ಹೊಸಬರಿಗೆ ಅವಕಾಶ ಸುಲಭವಾಗಿ ಸಿಗುವುದಿಲ್ಲ.

◆ **ಯಾವ ರೀತಿಯ ಪಾತ್ರದಲ್ಲಿ, ಸಿನಿಮಾಗಳಲ್ಲಿ ಕಾಣಿಸಿಕೊಳ್ಳುವ ಹಂಬಲವಿದೆ?**

ನಾನು 'ಡೈರೆಕ್ಟರ್ಸ್ ಆ್ಯಕ್ಟರ್'. ನಿರ್ದೇಶಕರು ನನ್ನನ್ನು ಯಾವ ರೀತಿ ನೋಡಲು ಬಯಸುತ್ತಾರೋ ಹಾಗೆ ನನ್ನನ್ನು ಮಾರ್ಪಾಡು ಮಾಡಿಕೊಳ್ಳಬಲ್ಲೆ. ಸಾಕಷ್ಟು ಕಥೆಗಳು ಬರುತ್ತಿವೆ. ಇನ್ನೊಂದು ಸಿನಿಮಾ ಮಾತುಕತೆ ಹಂತದಲ್ಲಿದೆ. ಜನರ ನಿರೀಕ್ಷೆಯನ್ನು ಹುಸಿ ಮಾಡಬಾರದು ಎಂಬ ಜವಾಬ್ದಾರಿಯೂ ಜೊತೆಗಿದೆ. ಉತ್ತಮ ಮನರಂಜನೆ ನೀಡುವಂಥ ಸಿನಿಮಾ ಎಂದಿಗೂ ನನ್ನ ಆದ್ಯತೆ. ■

# ಬೃಂದಾ ಅನುಭವದಲ್ಲಿ...



ಕನ್ನಡ ಸಿನಿಮಾರಂಗದಲ್ಲಿ ನಟಿ ಬೃಂದಾ ಆಚಾರ್ಯ ಪಯಣ ಆಶಾದಾಯಕವಾಗಿದ್ದು, 'ಎಕ್ಸ್ ಅಂಡ್ ವೈ' ಸಿನಿಮಾ ನಂತರ ವಿಭಿನ್ನ ಕಥಾಹಂದರದ ಸಿನಿಮಾಗಳಲ್ಲಿ ತೊಡಗಿಕೊಳ್ಳುತ್ತಿದ್ದಾರೆ.

ದುನಿಯಾ ವಿಜಿ ಹಾಗೂ ಶ್ರೇಯಸ್ ಮಂಜು ಅಭಿನಯದ 'ಮಾರುತ' ಸಿನಿಮಾದಲ್ಲಿ ಕೂಡ ಬೃಂದಾ ನಟಿಸಿದ್ದು, ನಿರ್ದೇಶಕ ಎಸ್. ನಾರಾಯಣ್ ಅವರ ಜೊತೆ ಕೆಲಸ ಮಾಡಿದ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ.

'ಎಸ್. ನಾರಾಯಣ್ ಅವರೊಂದಿಗೆ ಕೆಲಸ ಮಾಡಿದ್ದು ಫಿಲ್ಮ್ ಮೇಕಿಂಗ್‌ನ ಸಾಂಪ್ರದಾಯಿಕ ಮಾದರಿಯನ್ನು ಪರಿಚಯಿಸಿತು. ಪ್ರೊಡಕ್ಷನ್ ಹಾಗೂ ಯುನಿಟ್ ಸದಸ್ಯರೆಲ್ಲರೂ ದಶಕಗಳ ಕಾಲ ಸಿನಿಮಾರಂಗದಲ್ಲಿದ್ದವರು. ಸೆಟ್‌ನಲ್ಲಿ ಮಾನಿಟರ್ ಇರಲಿಲ್ಲ, ಆದರೆ ಕ್ಯಾಮೆರಾ ಜೊತೆಯೇ ನಿಂತಿದ್ದ ನಾರಾಯಣ್ ಸರ್ ಶಾಟ್ ಫ್ರೇಮ್ ಮಾಡುತ್ತಿದ್ದರು, ಮಾರ್ಗದರ್ಶನ ನೀಡುತ್ತಿದ್ದರು. ಚಿತ್ರೀಕರಣದ ನಡುನಡುವಲ್ಲೇ ಸಿನಿಮಾರಂಗದ ಹಲವು ಕಥೆಗಳನ್ನು ಹಂಚಿಕೊಂಡರು. ಅವರ ಮಾತುಗಳನ್ನು ಕೇಳುವುದೇ ಒಂದು ಅನುಭವ' ಎಂದಿದ್ದಾರೆ.

ಬೃಂದಾ ಆಚಾರ್ಯ ನಟನೆಯ 'ಮಾರುತ' ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ ಬಿಡುಗಡೆ ಹಾದಿಯಲ್ಲಿದ್ದು, ನಟ ಅಜಯ್ ರಾವ್ ಅವರೊಂದಿಗೆ 'ಸತ್ಯ ಸನ್ ಆಫ್ ಹರಿಶ್ಚಂದ್ರ' ಸಿನಿಮಾದಲ್ಲಿ, ಮನೋರಂಜನ್ ಅವರ ಸಿನಿಮಾವೊಂದರಲ್ಲಿಯೂ ಬೃಂದಾ ತೊಡಗಿಕೊಂಡಿದ್ದಾರೆ. ■